ಅಲ್ಲಿಯೇ ಪ್ರಾಕ್ಟೀಸ್ ಮಾಡಿಕೊಂಡಿರುವುದರಿಂದ ಮಾರಗಾನಕುಂಟೆ ಮತ್ತು ಸುತ್ತಮುತ್ತ ಗ್ರಾಮಸ್ಥರಿಗೆ ವೈದ್ಯಕೀಯ ಚಿಕಿತ್ಸೆ ಮಾಡಿಕೊಳ್ಳಲು ತುಂಬಾ ತೊಂದರೆಯಾಗಿರುತ್ತದೆ. ಆದ ಕಾರಣ ಗ್ರಾಮಾಂತರ ಪ್ರದೇಶಗಳಲ್ಲಿ ಕೇಂದ್ರ ಸ್ಥಾನ ಬಿಟ್ಟು ವೈದ್ಯರುಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್,— ಉತ್ತರವನ್ನು ಒದಗಿಸುತ್ತೇವೆ.

೩) ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಕ್ಕೆ ಒತ್ತಾಯ

SRI R. VENKATARAMAIAH.—In Karnataka as promised in the last Session, there is no recruitment of primary school teachers. Recruitment Committees were not constituted and no recruitment has laken place.

The season for starting Schools has started but schools are without teachers. for want of teaching staff.

Atleast now, urgently will the Government direct the Zilla parichads to recruit teachers in this year urgently.

ಶ್ರೀ ಅಬ್ದುಲ್ ನಜೀರ್‌ಸಾಬ್.— ಉತ್ತರ ತರಿಸಿಕೊಡುತ್ತೇನೆ.

ಶ್ರೀ ಆರ್ ವೆಂಕಟರಾಮಯ್ಯ.— ಅಲ್ಲಿ ಪಾಠಶಾಯಳಲ್ಲಿ ಉಪಾಧ್ಯಾಯರು ಇಲ್ಲದೆ ಸಾಯುತ್ತಾ ಇದ್ದಾರೆ ಎಂದರೆ ಇವರು ಉತ್ತರ ತರಿಸಿಕೊಡುತ್ತೇನೆಂದು ಹೇಳುತ್ತಾರಲ್ಲ, ಇವರು ಏನು ಉತ್ತರ ತರಿಸಿ ಕೊಡುವುದು ?

ಶ್ರೀ ಅಬ್ದುಲ್ ನಜೀರ್‌ಸಾಬ್.— ಇದು ತುಂಬಾ ಅತಿಯಾಯಿತು. ಇವರು ಓದಿದ ತಕ್ಷಣ ಉತ್ತರ ಹೇಳಿ ಎಂದರೆ ಅದು ಹೇಗೆ ಸಾಧ್ಯ ? ಈ ಸಭೆಗೆ ಜವಾಬ್ದಾರಿಯಿಂದ ಉತ್ತರ ಹೇಳಬೇಕಾಗುತ್ತದೆ. ಅದು ತರಿಸಿ ಹೇಳುತ್ತೇನೆ. ನೀವು ಕೇಳಿದ ತಕ್ಷಣ ಹೇಳಲು ಆಗುವುದಿಲ್ಲ ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.— ನಿಮಗೆ ಏನ್ರೀ ಕೆಲಸ, ನೀವು ಏತಕ್ಕೆ ಇರುವುದು ನಾವು ಹೇಳಿದ್ದನ್ನು ಕೇಳಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.— ಇವರು ಕೇಳಿದ ತಕ್ಷಣ ಉತ್ತರ ಹೇಳಲಿಕ್ಕೆ ಆಗುವುದಿಲ್ಲ. ಇದು ಸಿಸಿಳ ಇದಕ್ಕೆ ಈಗಲೇ ಉತ್ತರ ಹೇಳಿ ಎಂದು ಆಗುವುದಿಲ್ಲ. ನಾವು ತರಿಸಿ ಕೊಡುತ್ತೇವೆ.

ಅಧ್ಯಕ್ಷರು.— ಉತ್ತರ ತರಿಸಿಕೊಡುತ್ತೇವೆಂದು ಹೇಳಿದ್ದಾರಲ್ಲ.

೪) ಉಡುಪಿಯಲ್ಲಿ ಹಸಿರು ಕಾರ್ಡ್ ವಿತರಣೆಯ ಕುರಿತು

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಅಧ್ಯಕ್ಷರೆ, ಉಡುಪಿಯ ಯೋಜನಾ ಪ್ರಾಧಿಕಾರ, ಇದರ ವ್ಯಾಪ್ತಿಯಲ್ಲಿರುವ ಬಡವರಿಗೆ ಹಸಿರು ಕಾರ್ಡಿಗೆ ತತ್ವಾರ ಪ್ರಾಧಿಕಾರದ ವ್ಯಾಪ್ತಿ ಬರೀ ಉಡುಪಿ ಪುರಸಭಾ ವಲಯಕ್ಕೆ ಮಾತ್ರ ಅಲ್ಲ, ಸುತ್ತಮುತ್ತಲಿನ ಹತ್ತೊಭತ್ತು ಗ್ರಾಮಗಳಿಗೂ ಇರುವುದು ಸಂಪೂರ್ಣ. ಪ್ರಾಧಿಕಾರದ ದೆಸೆಯಿಂದಾಗಿ ಗ್ರಾಮೀಣ ಬಡವರಿಗೂ, ಹಸಿರು ಕಾರ್ಡಿಲ್ಲ ''ಪುರಸಭಾ ವಲಯದ ಬಡವರಿಗೂ ಹಸಿರು ಕಾರ್ಡು'' ಇದು ಮುಖ್ಯ ಮಂತ್ರಿಗಳ ಇತ್ತೀಚಿನ ಘೋಷಣೆ.